

ಡಾ.ವಿನೋದ ಛೆಬ್ಬಿ

**ಪರಸ್ಪರ ಪ್ರೀತಿ ಬಯಸುವ ಸಂಗಾತಿಗಳು ಆದಕ್ಕಾಗಿ ಹೋರಾಟ, ದೂರೀಕರಣ ಯಾಕೆ ನಡೆಸುತ್ತಾರೆ?**

# 268: ಹೊಸ ದಾರಿ - 8

ಪ್ರಾಣಿಮೆದುಳು ಮಾನವ ಮೆದುಳನ್ನು ಹೇಗೆ ಆಕ್ರಮಿಸಿಬಿಡುತ್ತದೆ ಎಂದು ಕಂಡುಕೊಂಡೆವು. ಥಟ್ಟನೆ ಎಚ್ಚೆತ್ತು ತಪ್ಪಿಸಿಕೊಳ್ಳುವ, ಹಾಗೂ ಆಕ್ರಮಣಕ್ಕೆ ಸಿದ್ಧಗೊಳಿಸುವ ಈ ಮೂಲಪ್ರವೃತ್ತಿಯು ಸಂಗಾತಿಗಳ ನಡುವೆ ನುಸುಳಿ ಏನೇನು ಹಾವಳಿ ಉಂಟುಮಾಡಬಹುದು ಎನ್ನುವುದು ಇಷ್ಟೊತ್ತಿಗೆ ನಿಮಗೆ ಮನದಟ್ಟಾಗಿರಬಹುದು. ಹೀಗಿದ್ದರೂ ಇದಕ್ಕೆ ಬಲವಾಗಿ ಕಚ್ಚಿಕೊಂಡಿರುವುದರ ಹಿನ್ನೆಲೆ ಏನೆಂದು ಈಸಲ ನೋಡೋಣ. ಅದಕ್ಕಾಗಿ ಮತ್ತೆ ಮಾಯಾ–ಮನೋಜ ಅವರ ಸಂಭಾಷಣೆಯ ತುಣುಕನ್ನು ಎತ್ತಿಕೊಳ್ಳೋಣ.

ಮಾಯಾ: ಮನೋಜ್, ನನ್ನನ್ನು ಪ್ರೀತಿಸುತ್ತೀಯಾ?

ಮನೋಜ: ಯಾಕೆ ಪದೇಪದೇ ಹೀಗೆ ಕೇಳುತ್ತೀಯಾ? ನಿನಗಾಗಿ, ಮಕ್ಕಳಿಗಾಗಿ ತಾನೇ ನಾನಿಷ್ಟು ದುಡಿಯುತ್ತಿರುವುದು?

ಮಾಯಾ: ನಾನೆಂದರೆ ನಿನಗೆ ಇಷ್ಟವೆ? ನೇರವಾಗಿ ಹೇಳು.

ಮನೋಜ: ಇಷ್ಟವಿಲ್ಲದಿದ್ದರೆ ಯಾವತ್ತೋ ನಿನ್ನನ್ನು ಬಿಟ್ಟುಹೋಗುತ್ತಿದ್ದೆ.

ಮಾಯಾ: ನಿನಗೆ ಸರಿಯಾಗಿ ಉತ್ತರಿಸಲು ಎಂದಿಗೂ ಬರುವುದಿಲ್ಲ!

ಮನೋಜ: ಸಮಸ್ಯೆ ನಿನ್ನಲ್ಲಿದೆ. ನನ್ನಮೇಲೆ ನಿನಗೆ ನಂಬಿಕೆಯಿಲ್ಲ!

ಇವರ ನಡುವೆ ಏನು ನಡೆದಿದೆ ಎಂದು ಅರ್ಥಮಾಡಿಕೊಳ್ಳುವುದಕ್ಕೆ ಹಿನ್ನೆಲೆ ಬೇಕಾಗುತ್ತದೆ.

ಶೈಶವ ಹಾಗೂ ಬಾಲ್ಯದಲ್ಲಿ ಆಗುವ ಭಾವನಾತ್ಮಕ 'ಗಾಯ'ಗಳ ಬಗೆಗೆ ಮುಂಚೆ ಹಲವೆಡೆ ಪ್ರಸ್ತಾಪಿಸಿದ್ದೇನೆ. ಈಗ ಚುಟುಕಾಗಿ ಹೇಳಿಬಿಡುತ್ತೇನೆ. ಮಗುವಿಗೆ ಆಹಾರ, ರಕ್ಷಣೆ, ಪ್ರೀತಿಯನ್ನು ಕೊಟ್ಟು ಪೋಷಿಸಿದಾಗ ಅದು ಭದ್ರಭಾವವನ್ನು ಬೆಳೆಸಿಕೊಳ್ಳುತ್ತ, ಬದುಕನ್ನು ಸಹಜವಾಗಿ ಹಾಗೂ ತನ್ನದೇ ವಿಶಿಷ್ಟವಾದ ರೀತಿಯಲ್ಲಿ ಅನ್ವೇಷಿಸಲು ಶುರುಮಾಡುತ್ತದೆ. ಜೊತೆಗೆ ಇತರರನ್ನು ಅನಿರ್ಬಂಧವಾಗಿ (**unconditional**) ಪ್ರೀತಿಸಲು ಕಲಿಯುತ್ತದೆ. ಇದೇ ಹಂತದಲ್ಲಿ ಹಿರಿಯರು ಬದುಕಲು ಅಗತ್ಯವಾದ ಕೌಶಲ್ಯಗಳನ್ನು ಕಲಿಸಿಕೊಡುತ್ತಾರೆ. ಈ ಪಾಠಗಳು ಹೆಚ್ಚಿನಂಶ ಪ್ರಾಣಿಮೆದುಳಿನಿಂದ ಹುಟ್ಟಿದ್ದು, ಎರಗು–ತೊಲಗುಗಳ ಪ್ರವೃತ್ತಿಯನ್ನು ಪುಷ್ಟೀಕರಿಸುತ್ತವೆ (ಉದಾ. ಇತರರನ್ನು ಮೀರಿಸು; ಈಗ ಕಷ್ಟಪಟ್ಟರೆ ಮುಂದೆ ಬಡತನದಿಂದ ಪಾರಾಗುತ್ತೀಯಾ). ಸಮಸ್ಯೆ ಏನೆಂದರೆ, ಬದುಕುವ ಪಾಠಗಳ ಜೊತೆಗೆ ಬಾಂಧವ್ಯದ ಬುಡಕ್ಕೇ ಏಟುಕೊಡುವ ಸಂದೇಶಗಳಿರುತ್ತವೆ. ಉದಾಹರಣೆಗೆ, 'ನಾವು ಕಲಿಸುವ ಪಾಠಕ್ಕಿಂತ ನಾವೇ ಹೆಚ್ಚು' ಎನ್ನುವ ಭಾವವನ್ನು ಸಾಕಷ್ಟು ಹಿರಿಯರು ತೋರಿಸುತ್ತಾರೆ. 'ನಮ್ಮ ಮಾತಿಗೆ (ನಿನ್ನ ಆತ್ಮಸಾಕ್ಷಿಗೆ ಅಲ್ಲ) ಬೆಲೆಕೊಡದಿದ್ದರೆ ನಮ್ಮ ಪ್ರೀತಿಯನ್ನು ಕಳೆದುಕೊಳ್ಳುತ್ತೀಯಾ!' ಎನ್ನುವ ಬೆದರಿಕೆ, ಹಾಗೂ 'ನಮಗೆ ಒಪ್ಪಿಗೆಯಲ್ಲದ ನಿನ್ನ ಬದುಕು ಬದುಕಲ್ಲ' ಎನ್ನುವ ನಿರಾಕರಣೆಯ ಧೋರಣೆಯು ಸಾಕಷ್ಟು ಹಿರಿಯರಲ್ಲಿದೆ. ಅಪ್ಪಣೆಯನ್ನು ಅನುಸರಿಸದಿದ್ದರೆ ಮಕ್ಕಳಿಗೆ ಅನಿರ್ಬಂಧ ಪ್ರೀತಿ ಒತ್ತಟ್ಟಿಗಿರಲಿ, ನಿಬಂಧನೆಗೆ ಒಳಪಟ್ಟ ಪ್ರೀತಿಯೂ ಸಿಗಲಾರದು. ಹಾಗಾಗಿ ಮಕ್ಕಳು ದೂರೀಕರಣದ ನೋವಿನಿಂದ ತಪ್ಪಿಸಿಕೊಳ್ಳಲು ಸ್ವಂತ ಭಾವನೆಗಳನ್ನು ಅಲ್ಲಗಳೆಯುತ್ತ ಹಿರಿಯರಿಗೆ ಶರಣಾಗುತ್ತಾರೆ. ಇಷ್ಟಾಗಿಯೂ ಪ್ರೀತಿ ಸಿಗದಿದ್ದರೆ ತಾಯ್ತಂದೆಯರೇ ಸರಿ, ತನಗೇ ಪ್ರೀತಿಗೆ ಅರ್ಹತೆಯಿಲ್ಲ ಎಂದು ತಪ್ಪಾಗಿ ನಂಬಿಕೊಳ್ಳುತ್ತಾರೆ. ಇವರ ಅಂತರಾಳದಲ್ಲಿ ಹಿರಿಯರಿಂದ ಬಂದ ಅವಹೇಳನ, ತಿರಸ್ಕಾರ, ಅನಾಥಪ್ರಜ್ಞೆ ದಟ್ಟವಾಗಿವೆ. ಇವರು ಪ್ರಬುದ್ಧರಾದಾಗ ಸಂಬಂಧದೊಳಗೆ ಮನಸ್ಸು ಬಿಚ್ಚುವುದೆಂದರೆ ಪರ್ವತಾರೋಹಣದಷ್ಟು ಶ್ರಮವಾಗುತ್ತದೆ. ಸಂಗಾತಿಯ ವರ್ತನೆಯಲ್ಲಿ ಪ್ರೀತಿಯನ್ನು ಕಂಡುಕೊಳ್ಳುವುದಕ್ಕೆ ಆತ್ಮಶಂಕೆ, ಮತ್ತು ಪ್ರೀತಿಯನ್ನು ಪ್ರಕಟಪಡಿಸಿದರೆ ಸಂಗಾತಿ ತಿರಸ್ಕರಿಸಿಯಾರು ಎನ್ನುವ ಭಯ–ಇವು ಪ್ರೀತಿಯ ಅಭಿವ್ಯಕ್ತಿಗೆ ತಣ್ಣೀರು ಎರಚುತ್ತವೆ. ಇದು ಮನೋಜನಲ್ಲಿ ಎದ್ದು ಕಾಣುತ್ತಿದೆ. ತನ್ನ ಕೋಮಲ ಭಾವನೆಗಳ ಜೊತೆಗೆ ಬಾಲ್ಯದಿಂದಲೇ ಸಂಪರ್ಕ ಕಡಿದುಕೊಂಡಿರುವುದರಿಂದ ಪ್ರೀತಿಯ ಮಾತೆತ್ತಿದರೆ ಹಳೆಯ ಗಾಯ ಕೆದಕಿದಂತಾಗುತ್ತದೆ. ಆಗ ರಕ್ಷಿಸಲು ಪ್ರಾಣಿಮೆದುಳು ಓಡಿಬರುತ್ತದೆ. "ನನ್ನ ಹತ್ತಿರ ಬಂದುಗಿಂದೀಯಾ, ಹುಷಾರ್!"

ಮನೋಜನಿಗಷ್ಟೇ ಅಲ್ಲ, ಮಾಯಾಳಿಗೂ ಇಂಥ ಸಮಸ್ಯೆಯಿದೆ. ತಾನು ಪ್ರೀತಿಸಿಕೊಳ್ಳಬೇಕು, ಸಂಗಾತಿಯಿಂದ ಮೆಚ್ಚಿಸಿಕೊಳ್ಳಬೇಕು ಎನ್ನುವ ಬಯಕೆ ಸಹಜವಾಗಿದೆ. ಮನೋಜ ಪ್ರೀತಿಸುತ್ತಾನೆ, ಆದರೂ ಬಾಯಿಬಿಟ್ಟು ಹೇಳುವುದು ಅವನ ಸ್ವಭಾವವಲ್ಲ ಎಂಬುದು ಆಕೆಗೆ ಗೊತ್ತು. ಆದರೂ ಯಾಕೀ ಹಕ್ಕೊತ್ತಾಯ? ಪ್ರೀತಿಗೆ ಅರ್ಹತೆಯ ಬಗೆಗೆ ಆಕೆಗೇ ಸ್ವತಃ ಸಂದೇಹವಿದೆ. ಮನೋಜ ಅದನ್ನು ಮತ್ತೆಮತ್ತೆ ಖಚಿತಪಡಿಸುತ್ತಿದ್ದರೆ ಮಾತ್ರ ಪ್ರೀತಿಯ ಅರ್ಹತೆ ಮನಸ್ಸಿಗೆ ಮುಟ್ಟುತ್ತದೆ. ಅದಿಲ್ಲದ ಹೊರತೂ ಮಾಯಾ ತನ್ನನ್ನೇ ನಂಬುವುದಿಲ್ಲ; ತನ್ನ ಅಪನಂಬಿಕೆಯನ್ನು ಅವನಮೇಲೆ ಪ್ರಕ್ಷೇಪಿಸುತ್ತ, ಅವನಿಗೇ ಪ್ರೀತಿಸಲು ಬರುವುದಿಲ್ಲವೆಂದು ದೂರುತ್ತಾಳೆ. ಒಂದುವೇಳೆ ಸ್ಪಂದಿಸಿ ಮೆಚ್ಚುಗೆ ಬಂದರೆ? 'ಹೌದೆ? ಪ್ರೀತಿಗೆ ನಾನಿಷ್ಟು ಅರ್ಹಳು ಎಂದು ನನಗೇ ನಂಬಲಾಗುತ್ತಿಲ್ಲ!' ಎಂದೆನಿಸುತ್ತ, ಮತ್ತೆಮತ್ತೆ ಕೇಳಿ ಖಚಿತಪಡಿಸಿಕೊಳ್ಳುತ್ತಾಳೆ. ಸ್ಪಂದನೆ ಸಿಗದಿರುವಾಗ ವಿಷಾದತೆಯಿಂದ ಸುಮ್ಮನಿರಬಹುದಿತ್ತು. ಆದರೆ ಆಕೆಯ ಪ್ರಾಣಿಮೆದುಳು ಸುಮ್ಮನಿರಿಸುವುದಿಲ್ಲ. 'ಒಪ್ಪಿಕೊಳ್ಳದಿದ್ದರೆ ಆಕ್ರಮಣ ಮಾಡು!' ಹಾಗಾಗಿ ಹೀನೈಸುತ್ತಾಳೆ. ಇಬ್ಬರೂ ತಮ್ಮ ಅವಹೇಳನೆಯನ್ನು (**shame**) ಮುಂದೆಮಾಡಿಕೊಂಡು ಸಂಗಾತಿಯ ಮೇಲೆ ದೋಷಾರೋಪಣೆ ಮಾಡುತ್ತಾರೆ. ಹೆತ್ತವರೊಡನೆ ಇದ್ದಂತೆ ಸಂಗಾತಿಯ ಜೊತೆಗೂ ಪ್ರೀತಿಯ ಅನರ್ಹತೆಯನ್ನು ನಟಿಸುತ್ತಾರೆ. 'ನಾನು ಪ್ರೀತಿಗೆ ಅರ್ಹನ/ಳಲ್ಲ, ಅದಕ್ಕಾಗಿ ಕೊಟ್ಟಿಗಿಟ್ಟೀಯಾ, ಜೋಕೆ!' ಎಂದು ಎಚ್ಚರಿಕೆಯ ಗಂಟೆ ಮೊಳಗಿಸುತ್ತ ಇರುತ್ತಾರೆ.

ದಾಂಪತ್ಯದಲ್ಲಿ ಸಹಜ ಪ್ರೀತಿ ಯಥೇಷ್ಟ ಸಿಗದಿದ್ದಾಗ ನಮ್ಮದೇ ಕಥನ ಕಟ್ಟುತ್ತ ವ್ಯಾಖ್ಯಾನಿಸುತ್ತೇವೆ. ಏನೇನೋ ಭಾವನಿರ್ಧಾರ ಕೈಗೊಳ್ಳುತ್ತೇವೆ. ಪ್ರೀತಿಗಾಗಿ ಹೋರಾಟ ಮಾಡಲೇಬೇಕು. ಸಿಕ್ಕ ಪ್ರೀತಿ ಸಹಜ ಆಗಿರಲಾರದು, ಹಾಗಾಗಿ ಪರೀಕ್ಷಿಸದ ಹೊರತು ಒಪ್ಪಿಕೊಳ್ಳಕೂಡದು. ಪ್ರೀತಿಗಾಗಿ ಕೇಳಿಕೊಳ್ಳುವುದು ನಾಚಿಕೆಗೇಡು. ಕೊಡಬೇಕಾಗಿ ಬಂದಾಗ ಅರ್ಹತೆಯನ್ನು ಪರೀಕ್ಷಿಸಬೇಕು. ಕೊಡುವವರು ಪಡೆಯುವವರಿಗಿಂತ ಶ್ರೇಷ್ಠ. ಪ್ರೀತಿಗೆ ಅಂಗಲಾಚುವುದು ಒಂದು ಸಂಕಟವಾದರೆ ಅದರಿಂದ ದೂರವುಳಿದರೆ ಕಳೆದುಕೊಂಡ ಇನ್ನೊಂದು ಸಂಕಟ. ಸಿಕ್ಕಾಗ ಅರ್ಹತೆಯ ಬಗೆಗೆ ಸಂದೇಹ. ಮತ್ತೆಮತ್ತೆ ಕೇಳಿ ಖಚಿತಪಡಿಸಿಕೊಳ್ಳುವ ಹಪಹಪಿ, ಹಾಗೂ ಕೊನೆಯರಿಯದ ಅತೃಪ್ತಿ. ಪ್ರೀತಿಯನ್ನು ಮರಳಿ ಕೊಟ್ಟರೆ ಕಳಪೆಯೆಂದು ತಿರಸ್ಕೃತವಾಗುವ ಭಯ. ಆಗಾಗಬಹುದಾದ ಅವಮಾನ, ಒಂಟಿತನ, ಅನಾಥಪ್ರಜ್ಞೆ... ಆತ್ಮಶಂಕೆ ಹುಟ್ಟಲು ಕಾರಣಗಳು ಒಂದೇ ಎರಡೇ? ಹೆಚ್ಚಿನ ಚಲನಚಿತ್ರಗಳ ಬಂಡವಾಳವೇ ಇದು!

ಎಲ್ಲರೂ ಇದನ್ನು ಗೋಡೆಯ ಮೇಲೆ ಬರೆದಂತೆ ಸ್ಪಷ್ಟವಾಗಿಸಿಕೊಳ್ಳಿ: ಪ್ರತಿಯೊಬ್ಬರೊಳಗೂ ಒಂದು ಮಗುವಿದೆ. ಅದಕ್ಕೆ ಸಹಜ ಪ್ರೀತಿಯ ಅರ್ಹತೆಯಿದೆ. ಪ್ರೀತಿಯನ್ನು ಕೊಡಕೊಳ್ಳುವುದು ಅದರ ಹುಟ್ಟುಗುಣ. ಯಾರ ಜೊತೆಗಾದರೂ ಆಗಲಿ, ಪ್ರೀತಿಯನ್ನು ಹಂಚಿಕೊಳ್ಳುವುದಕ್ಕೆ ಸಂಕೋಚ ಕೂಡದು. ಪ್ರೀತಿಯನ್ನು ಕೊಡಕೊಳ್ಳುವ ಹಾದಿಯಲ್ಲಿ ಎಡವುವುದು ಸಹಜ; ಹಾಗೆಂದು ಪ್ರಯತ್ನ ಬಿಡಬಾರದು. ಆಗ ಪ್ರಾಣಿಮೆದುಳು ಅಡ್ಡಬಂದರೆ, 'ಪ್ರೀತಿಯ ಬಗೆಗೆ ನಿನಗೇನೂ ಗೊತ್ತಿಲ್ಲ. ಅದಕ್ಕೆ ತಿರಸ್ಕಾರ ಎದುರಿಸಿದರೂ ಸರಿ, ಬಿಚ್ಚುಭಾವವೇ ಇರಲಿ' ಎಂದು ಹೇಳಿಕೊಳ್ಳುವುದನ್ನು ಕಲಿಯಬೇಕು.

ವಾರದ ಪ್ರಶ್ನೆಗಳು: ನಿಮ್ಮಷ್ಟಕ್ಕೆ ನೀವೇ ಕೇಳಿಕೊಳ್ಳಿ: ಬಾಲ್ಯದಲ್ಲಿ ಹಿರಿಯರಿಂದ ಸಾಕಷ್ಟು ಪ್ರೀತಿ ಸಿಕ್ಕಿದುದರ ಬಗೆಗೆ ನನಗೆ ತೃಪ್ತಿ ಇದೆಯೆ? ಪ್ರೀತಿಯ ಹೆಸರಲ್ಲಿ ಬೇಡದ್ದು ಏನೇನು ಸಿಕ್ಕಿದೆ? ಆಗ ಉಂಟಾದ ನೋವನ್ನು ಮರೆಯಲು ನಾನೇನು ಭಾವನಿರ್ಧಾರ ಕೈಗೊಂಡೆ? ನನ್ನ ಪ್ರೀತಿಯ ಅರ್ಹತೆಯ ಬಗೆಗೆ ಏನೆನಿಸುತ್ತದೆ? ಬಾಲ್ಯದ ಯಾವ ಅನುಪಯೋಗಿ ಸಂದೇಶಗಳನ್ನು ದಾಂಪತ್ಯದಲ್ಲಿ ಅನುಸರಿಸುತ್ತಿದ್ದೇನೆ? ನಿಮ್ಮ ಅನಿಸಿಕೆಗಳನ್ನು ಸಂಗಾತಿಯೊಡನೆ ಮುಕ್ತ ಮನಸ್ಸಿನಿಂದ ಹಂಚಿಕೊಳ್ಳಿ; ತಪ್ಪದೆ ದಿನಚರಿಯಲ್ಲಿ ಬರೆದಿಟ್ಟುಕೊಳ್ಳಿ. ಮನಸ್ಸಾದರೆ ನನಗೂ ತಿಳಿಸಿ.

ಸಂಪರ್ಕಕ್ಕೆ ದೂರವಾಣಿ ಸಂಖ್ಯೆ: 8494933888;

**Email: vinod.chebbi@gmail.com**